

ಅವನು ಯೋಧ, ಅವನಲ್ಲದೆ ದೇಶದ ಗಡಿ ಯಾರು ಕಾಯಬೇಕು? ಆ ಬಗ್ಗೆ ನನಗೆ ಹೆಮ್ಮೆಯಿದೆ. ಆದರೆ ಮನೆಯಲ್ಲಿ ಎರಡು ಪುಟ್ಟ ಕಂದಮ್ಮಗಳು ಇದ್ದಾವುದರ ಅರಿವಿಲ್ಲದೆ ಅಂಗಳದಲ್ಲಿ ಆಟ ಆಡುತ್ತಿವೆ. ಅವ್ವ ಒಲೆಯ ಮುಂದೆ ಉರಿಯುತ್ತಿದ್ದಾಳೆ. ನಾಳೆಯೋ ನಾಡಿದ್ದೋ ಕಣ್ಣಿನ ಆಪರೇಷನ್ ಮಾಡಿಸಿಕೊಳ್ಳಬೇಕಾದ ಅಪ್ಪ, 'ದಂಗಿ ಕಡಿಮಿ ಆಗಲಿ ಆಮ್ಯಾಲ ಆಪರೇಷನ್ ಮಾಡಿಸಿದರಾಯ್ತು' ಅಂತ ಹಾಸಿಗೆ ಹಿಡಿದಿದ್ದಾನೆ.

ನನ್ನ ಅತ್ತಿಗೆಗೆ ಗೊತ್ತಿಲ್ಲ. ಆದರೆ ಅದೇ ತಾಯಿಕರುಳು, ಅವವೇ ಸಂಕಟಗಳು ತಲೆಮಾರಿನಿಂದ ತಲೆಮಾರಿಗೆ, ರಾಜ್ಯಗಳಳಿದರೂ ರಾಜರು ಉರುಳಿದರೂ.

ನನ್ನ ಊರು ಇರುವುದು ಮಹಾರಾಷ್ಟ್ರದ ಗಡಿಯಿಂದ ಕೇವಲ 2 ಕಿ.ಮೀ. ದೂರದಲ್ಲಿ. ಅಲ್ಲಿ ಭರಪೂರ ಬರಗಾಲಗಳು. ಹಾಸಿ ಹೊಚ್ಚಿ ಹೊದ್ದರೂ ಮಿಗುವ ಬಡತನ. ಇಲ್ಲಿನ ನೂರಾರು ಹಳ್ಳಿಗಳಿಗೆ ಆ ಕಾಲಕ್ಕೆ ಯಾರೂ ಹೆಣ್ಣು ಕೊಡುತ್ತಿರಲಿಲ್ಲ. ಕಾರಣವಿಷ್ಟೇ, ಎಲ್ಲಿ ತಮ್ಮ ಮಗಳು ದೂರದಿಂದ ನೀರಬಿಂದಿಗೆಯ ಹೊತ್ತು ಹೊತ್ತೇ ಸವೆದುಹೋದಾಳೆಂಬ ಕಾಳಜಿ. ಈಗ ಪರಿಸ್ಥಿತಿ ಸ್ವಲ್ಪ ಬದಲಾಗಿದೆ. ಯಥೇಚ್ಛ ನೀರಿದೆ, ಬೇಸಿಗೆಯ ಹೊರತುಪಡಿಸಿ. ಅರ್ಧ ಮರಾಠಿ, ಅರ್ಧ ಕನ್ನಡ ಬೆರೆತ ಭಾಷೆಯ ವಿಶಿಷ್ಟ ಸೊಗಡಿನ ಸೊಲ್ಲಿದೆ. ಇವರಿಗೆಂದಿಗೂ ನಾನು ಕನ್ನಡಿಗ, ನಾನು ಮಹಾರಾಷ್ಟ್ರಿಗ ಎನ್ನಿಸುವ ಭೇದ ಕಂಡಿಲ್ಲ. 'ಟೈಮೆಷ್ಟಾತು' ಅಂತ ಕೇಳಿದರೆ, 'ಬಾರಾ' ಅನ್ನುತ್ತಾರೆ. ಬೆಳಗಾವಿ ಗಡಿ ಸಮಸ್ಯೆಯೊಂದು ಇವರ ಪ್ರಜ್ಞೆಯಲ್ಲೇ ಇಲ್ಲ.

ನನಗನ್ನಿಸುವ ಹಾಗೆ, ಈ ಭಾಷೆ, ದೇಶ, ಗಡಿ, ಭೇದವೆನ್ನುವುದು ತುಸು ಓದಿದ ನನ್ನಂತಹವನಿಗೆ ಮಾತ್ರ. ಸಂವಿಧಾನ ಒಪ್ಪಿಕೊಂಡ ಮೇಲೆ state ಒಪ್ಪಿಕೊಳ್ಳಲೇಬೇಕು ಬಿಡಿ. ಆದರೆ ಇಲ್ಲಿ ನಾನು ಹೇಳಲು ಹೊರಟಿರುವುದು ಅದಲ್ಲ. ನಾನಿರುವ ಊರಿನ ಸುಮಾರು ನಲವತ್ತು–ಐವತ್ತು ಹಳ್ಳಿಗಳ ಪ್ರತಿಯೊಬ್ಬರ ಮನೆಯಲ್ಲಿ ಒಬ್ಬೊಬ್ಬ ಯೋಧರಿದ್ದಾರೆ. ಯೋಧರೆಂದರೆ ಸಿಪಾಯಿ, ಬಹಳವೆಂದರೆ ಲ್ಯಾನ್ಸ್ ನಾಯಕ ಹುದ್ದೆಯಂತಹ ಕೆಳಹಂತದ ಸ್ಥಾನದಲ್ಲಿರುವವರು. ಇವರಿಗೆ ಮಿಲಿಟರಿ ಸೇರುವ ಏಕೈಕ ಆಕರ್ಷಣೆಯೆಂದರೆ ಸಂಬಳ. ಎಸ್ಸೆಸ್ಸೆಲ್ಸಿ, ಪಿಯುಸಿ ಓದಿದವರಿಗೆ ಇಷ್ಟು ಸಂಬಳ (25–30 ಸಾವಿರ ರೂಪಾಯಿ) ಬೇರೆ ಎಲ್ಲಿ ಕೊಡಲು ಸಾಧ್ಯ?

ಈಗೀಗ ದೈಹಿಕ ದೃಢತೆಯಿಲ್ಲದವರು ಟೀಚರ್ ಆಗುತ್ತಿದ್ದಾರೆ. ಈ ಯುವಕರಿಗೆ ಕಣ್ಣು ತುಂಬ ಕನಸುಗಳಿವೆ, ಆದರೆ ಹೆಚ್ಚಿನ ವ್ಯಾಸಂಗಕ್ಕೆ ಅನುಕೂಲಕರ ಪರಿಸರವಿಲ್ಲ. ಜೂಜಾಡುವ ಮಳೆಯ ನಂಬಿ ಕೃಷಿ ಮಾಡಿ, ಸಾಲ ಮಾಡಿ, ನೇಣಿಗೆ ಹೋಗುವ ಬದಲು, ಹೆಂಡತಿ–ಮಕ್ಕಳು, ಮುದಿ ತಾಯಂದಿರು ಖುಷಿಯಾಗಿರಲೆಂದು ಅನಿವಾರ್ಯವಾಗಿ ಹೆಗಲಿಗೆ ಬಂದೂಕು ಹಾಕುತ್ತಾರೆ. ಬಂದೂಕು ಹಾಕಿದ ಮೇಲೆ ದೇಶ ಕಾಯಲೇಬೇಕು, ಎದುರಾಳಿಯನ್ನು ಹೊಡೆಯಲೇಬೇಕು. ಮತ್ತು ದೇಶಪ್ರೇಮವೆಂಬ ಕೆಚ್ಚನ್ನು ಎದೆಯಲ್ಲಿ ಕಾಪಿಡಲೇಬೇಕು.

ನಿಮಗೆ ತಮಾಷೆಯೆನಿಸಬಹುದು, ನನ್ನ ಸಹಪಾಠಿಯೊಬ್ಬ ಸೈನ್ಯಕ್ಕೆ ಸೇರಿದ್ದ. ಅವನೆಷ್ಟು ಸಂಭಾವಿತ ಮುಗ್ಧನೆಂದರೆ, ಒಂದು ಇರುವೆಯನ್ನೂ ಜೀವಮಾನದಲ್ಲಿ ಸಾಯಿಸದವನು. 'ಹೆಣ್ಣಮ್ಮ' ಅಂತ ರೇಗಿಸಿಕೊಂಡವನೇ ಮುಂದೆ ಕಾರ್ಗಿಲ್‌ನ ಗಡಿಯಲ್ಲಿ ಹುತಾತ್ಮನಾದ. ಅವನ ಸ್ಮಾರಕ ನಮ್ಮೂರ ಪಕ್ಕದ ನವಲಿಹಾಳವೆಂಬ ಚಿಕ್ಕ ಊರಿನಲ್ಲಿದೆ. ಈ ಸೀಮೆ ದಾಟುವಾಗಲೆಲ್ಲ ನನ್ನ ಕಣ್ಣುಗಳು ತೇವವಾಗುತ್ತವೆ. ಬೇರೆಯವರ ವಿಷಯ ಬಿಡಿ, ನನ್ನ ಅಣ್ಣನ ಮಗ ಮಹೇಶ ಈಗ 'ಬಿಎಸ್‌ಎಫ್'ನ ಜವಾನ. ಮೊನ್ನೆ ತಾನೆ ರಾಜಸ್ಥಾನದಲ್ಲಿ ಡ್ಯೂಟಿ ರಿಪೋರ್ಟ್ ಮಾಡಿಕೊಂಡವನು, ಕಳೆದ ಮೂರು ದಿನಗಳಿಂದ ಅವನ ಫೋನು ನಾಟ್ ರೀಚಬಲ್. ಬಹುಶಃ ಅವನು ಗಡಿಭಾಗದಲ್ಲಿ ನಿಯೋಜಿತನಾಗಿರಬೇಕು. ನಾನು ಅರ್ಥ ಮಾಡಿಕೊಳ್ಳಬಲ್ಲೆ – ಅವನು ಯೋಧ, ಅವನಲ್ಲದೆ ದೇಶದ ಗಡಿ ಯಾರು ಕಾಯಬೇಕು? ಆ ಬಗ್ಗೆ ನನಗೆ ಹೆಮ್ಮೆಯಿದೆ. ಆದರೆ ಮನೆಯಲ್ಲಿ ಎರಡು ಪುಟ್ಟ ಕಂದಮ್ಮಗಳು ಇದ್ದಾವುದರ ಅರಿವಿಲ್ಲದೆ ಅಂಗಳದಲ್ಲಿ ಆಟ ಆಡುತ್ತಿವೆ. ಅವ್ವ ಒಲೆಯ ಮುಂದೆ ಉರಿಯುತ್ತಿದ್ದಾಳೆ. ನಾಳೆಯೋ ನಾಡಿದ್ದೋ ಕಣ್ಣಿನ ಆಪರೇಷನ್ ಮಾಡಿಸಿಕೊಳ್ಳಬೇಕಾದ ಅಪ್ಪ, 'ದಂಗಿ ಕಡಿಮಿ ಆಗಲಿ ಆಮ್ಯಾಲ ಆಪರೇಷನ್ ಮಾಡಿಸಿದರಾಯ್ತು' ಅಂತ ಹಾಸಿಗೆ ಹಿಡಿದಿದ್ದಾನೆ.

ಪ್ರಸಕ್ತ ಸಂದರ್ಭದಲ್ಲಿ ಯುದ್ಧ 'ಬೇಡ'ವೆಂದರೆ ನಾನು ದೇಶದ್ರೋಹಿ, ಸ್ವಾರ್ಥಿಯಾಗುತ್ತೇನೆ. 'ಬೇಕು' ಅಂದರೆ ಹಿಂಸೆಗೆ ಪ್ರಚೋದಿಸಿದಂತಾಗುತ್ತದೆ. ನಾನಿಲ್ಲಿ ಅಲಿಪ್ತ. ಯುದ್ಧದ ತೀರ್ಮಾನವನ್ನು ಪ್ರಭುತ್ವ ಮಾಡುತ್ತದೆ. ಸಂಘರ್ಷದ ನೆಲದಲ್ಲಿನ ನನ್ನ ಮಗ ಮಹೇಶ ಅಥವಾ ಅವನಂತಹ ಅಣ್ಣತಮ್ಮಂದಿರು ಸುರಕ್ಷಿತವಾಗಿ ಮನೆಗೆ ಬರಲಿ ಎಂದು ದೇವರಿಗೆ ತುಪ್ಪದ ದೀಪ ಹಚ್ಚುವ, ಹರಕೆ ಹೊರುವಷ್ಟು ಬಲವನ್ನು ಭಾರತಾಂಬೆ ನನಗೆ ನೀಡಲಿ ಎಂದಷ್ಟೇ ನಾನು ಪ್ರಾರ್ಥಿಸಬಲ್ಲೆ.

